

ಸಿಲೇರಿಗಾಂವ್ ರಸ್ತೆ

ಅಗಾಧ ಸೌಂದರ್ಯ ಕಣ್ಣು ತುಂಬುವಂತಿತ್ತು.

ಮೂರು ಗಂಟೆಯ ಪ್ರಯಾಣದ ನಂತರ ಮೋಡದ ರಾಶಿಯ ಮಧ್ಯೆ ಕಾಲೀಮ್ ಪೊಂಗ್ ನಗರ ಸಿಕ್ಕಿತು. ನೋಡಲು ನಮ್ಮ ಮಡಿಕೇರಿಯ ಹಾಗೆಯೇ ಇದೆ. ಸ್ವಚ್ಛವಾಗಿ, ಅಚ್ಚುಕಟ್ಟಾಗಿರುವ ನಗರದಲ್ಲಿ ತಣ್ಣನೆಯ ಗಾಳಿ ಮತ್ತು ಸುಂದರ ಪ್ರಕೃತಿ ಸ್ವಾಗತಿಸಿತು. ಇಲ್ಲಿಂದ ಮುಂದೆ ಸಿಲೇಂಗಾವ್ 10 ಕಿ.ಮೀ. ದೂರ. ಅರ್ಧ ಸಾಗಿದ ಬಳಿಕ ರಸ್ತೆ ತುಂಬ ದುರ್ಗಮವಾಗಿತ್ತು. ರಸ್ತೆ ತುಂಬಾ ಹಾಳಾಗಿದ್ದು ಕಲ್ಲು ಮತ್ತು ಕೆಸರಿನಿಂದ ಕೂಡಿತ್ತು. ಐದು ಕಿಮೀ ಸಾಗಲು ಅರ್ಧ ಗಂಟೆ! ಕೊನೆಗೂ ನಮ್ಮ ಬೇಸ್‌ಪಾಯಿಂಟ್ ಸಿಲೇರಿಗಾಂವ್ ಪ್ರತ್ಯಕ್ಷವಾಯಿತು.

20–30 ಮನೆಗಳಿರುವ ಹಿಮಾಲಯದ ತಪ್ಪಲಿನ ಪೈನ್ ಮರಗಳಿಂದ ಕೂಡಿದ ಗುಡ್ಡದ ಇಳಿಜಾರಿನಲ್ಲಿರುವ ಸುಂದರವಾದ ಹಳ್ಳಿ. ಇಲ್ಲಿ ಹೆಚ್ಚಿನ ಮನೆಗಳನ್ನು ಮರಗಳಿಂದ ನಿರ್ಮಿಸಿರುತ್ತಾರೆ. ಮನೆಗೆ ತಗಡಿನ ಚಾವಣಿ. ಮನೆ ಕಟ್ಟುವ ಖರ್ಚು ಕಡಿಮೆ. ಬರೀ ಮೂರು ಲಕ್ಷ ರೂಪಾಯಿಗೆ ಸಣ್ಣದಾದ ಕಲಾತ್ಮಕತೆಯಿಂದ ಕೂಡಿದ ಮನೆಯನ್ನು ಕಟ್ಟುತ್ತಾರೆ. ಈ ಊರಲ್ಲಿ ಬಾವಿ ಇಲ್ಲ. ಬೆಟ್ಟದಿಂದ ಬರುವ ಝರಿಯ ನೀರನ್ನು ಬಳಸುತ್ತಾರೆ. ತರಕಾರಿಗಳನ್ನು ಮನೆ ಅಂಗಳದಲ್ಲೇ ಬೆಳೆದು ನಿತ್ಯ ಉಪಯೋಗಿಸುತ್ತಾರೆ.

ಇಲ್ಲಿನ ಬಹುತೇಕ ಮನೆಗಳು ಹೋಮ್‌ಸ್ಟೇಗಳಾಗಿವೆ. ಇಲ್ಲಿ ಅಂತರಧರ್ಮೀಯ ವಿವಾಹ ಸಾಮಾನ್ಯ. ಹಿಂದೂ ಹಾಗೂ ಕ್ರೈಸ್ತರ ನಡುವೆ ವೈವಾಹಿಕ ಸಂಬಂಧಗಳು ಸಲೀಸಾಗಿ ನೆರವೇರುತ್ತವೆ. ಅದಕ್ಕಾಗಿ ಇಲ್ಲಿ ಗಲಭೆ ಮಾಡುವವರೇ ಇಲ್ಲ! ನಾವು ಮಾತನಾಡಿಸಿದ ಬಹುತೇಕರದ್ದು ಅಂತರಧರ್ಮೀಯ ವಿವಾಹ. ನಮ್ಮ ಹೋಮ್‌ಸ್ಟೇ ಮಾಲೀಕ ರಾಜನ್ ಕ್ರಿಶ್ಚಿಯನ್ ಧರ್ಮದವನು. ತನ್ನ ಮಗಳನ್ನು ಹಿಂದೂ ಧರ್ಮದ ಅಜೆಯ ಛೆತ್ರಿಗೆ ಮದುವೆ ಮಾಡಿಸಿಕೊಟ್ಟಿದ್ದಾನೆ. ಅಳಿಯ ಅಜೆಯ್ ಇವರ ಜೊತೆಗೇ ವಾಸವಾಗಿದ್ದಾನೆ.

ಈ ಹಳ್ಳಿಯ ಜನರ ಮುಖ್ಯ ಭಾಷೆ ನೇಪಾಳಿ. ನೇಪಾಳಿ ಭಾಷೆ ದಾರ್ಜಿಲಿಂಗ್ ಜಿಲ್ಲೆ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಸಾಮಾನ್ಯ. ಸಿಲೆರಿಗಾಂವ್ ಅನ್ನು ನ್ಯೂ ಡಾರ್ಜಿಲಿಂಗ್ ಎಂದು ಕರೆಯುತ್ತಾರೆ. ಡಾರ್ಜಿಲಿಂಗ್‌ನ ಪ್ರಕೃತಿ ಸೌಂದರ್ಯ ಈ ಹಳ್ಳಿಗೂ ಇರುವುದರಿಂದ ಹೀಗೆ ಕರೆಯುತ್ತಾರೆ.



ತೀಸ್ತಾ ನದಿ

ಜನರು ತುಂಬಾ ಸ್ನೇಹಪ್ರಿಯರು. ಬಹಳ ಪ್ರೀತಿಯಿಂದ ಮಾತನಾಡಿಸುತ್ತಾರೆ. ಅತಿಥಿಗಳನ್ನು ತುಂಬ ಸತ್ಕರಿಸುತ್ತಾರೆ.

ಬೆಳಗಿನ 4.30ಕ್ಕೆ ಇಲ್ಲಿ ಬೆಳಕು ಹರಿಯುತ್ತದೆ. ಸಂಜೆ 5.30ಕ್ಕೇ ಕತ್ತಲಾಗುತ್ತದೆ. ರಾತ್ರಿ ಮೋಡ ಇಲ್ಲದೇ ಹೋದಲ್ಲಿ 70 ಕಿ.ಮೀ ದೂರದ, ವಿದ್ಯುತ್ ದೀಪಗಳಿಂದ ಕಂಗೊಳಿಸುವ ಗ್ಯಾಂಗ್ಟಕ್ ನಗರದ ರಮ್ಯನೋಟ ಸವಿಯಬಹುದು.

ಇಲ್ಲಿಂದ 2 ಕಿ.ಮೀ. ದೂರದಲ್ಲಿರುವ ಡ್ಯಾಮ್ಸಂಗ್ ಫೋರ್ಟ್ ನೋಡಲು ನಡೆದುಕೊಂಡೇ ಹೋದೆವು. ಇಲ್ಲಿ ಸ್ವಲ್ಪ ಇಂಬಳದ ಕಾಟವಿದೆ. ಆದರೆ ನಮ್ಮ